**1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ನಂಜನಗೂಡು**

**ಸಿ.ಸಿಃ 404/2015**

| | | | |
|---|---|---|---|
| ಸಾಕ್ಷಿದಾರರ ಹೆಸರು | | ಡಾ. ವಿಜಯನರಸಿಂಹ | ಪ್ರಾಸಾಃ 7 |
| ತಂದೆಯ/ಗಂಡನ ಹೆಸರು | | ಲಕ್ಷ್ಮೀನಾರಾಯಣ | ಚಾಸಾಃ 6 |
| ವಯಸ್ಸು | | 55 ವರ್ಷ | |
| ಕೆಲಸ | | ನೇತ್ರ ತಜ್ಞರು, ಸಾರ್ವಜನಿಕ ಆಸ್ಪತ್ರೆ ನಂಜನಗೂಡು | ಸಾ ಪ್ರ ಬೋ |
| ವಾಸ | | ಮೈಸೂರು | ದಿಃ 19.02.2024 |

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ**

ನಾನು ನಂಜನಗೂಡಿನ ಸರ್ಕಾರಿ ಆಸ್ಪತ್ರೆಯಲ್ಲಿ 2012 ರಿಂದ ಇಲ್ಲಿಯವರೆಗೆ ನೇತ್ರ ತಜ್ಞರಾಗಿ ನಂಜನಗೂಡು ಸಾರ್ವಜನಿಕ ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ 20.04.2014 ರಂದು ಬೆಳಿಗ್ಗೆ 10.30 ಗಂಟೆ ಸಮಯದಲ್ಲಿ ಈ ಪ್ರಕರಣದ ಗಾಯಾಳು ಚಾಸಾ-1 ರವರು ಹಲ್ಲೆ ಇತಿಹಾಸದಲ್ಲಿ ಚಿಕಿತ್ಸೆಗಾಗಿ ನಮ್ಮ ಆಸ್ಪತ್ರೆಗೆ ಬಂದಾಗ ಅವರನ್ನು ಪರೀಕ್ಷಿಸಲಾಗಿ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತದೆ.

1. ಎಡ ಮತ್ತು ಬಲ ಮುಂಗೈ ನಲ್ಲಿ 5*5 ಸೆಂಟಿಮೀಟರ್ ಅಳತೆಯ ಊತದ ಗಾಯ (Contusion on Left and Right Forearm measuring about 5*5 cm Blackening)

2. ತಲೆಯ ಮೇಲೆ 2*1/2 ಸೆಂಟಿಮೀಟರ್ ಅಳತೆಯ ರಕ್ತಸ್ರಾವದಿಂದ ಕೂಡಿದ ಹರಿದ ಗಾಯ (Lacerated wound over Vertex about 2*1/2 cm fresh bleeding)

ನನ್ನ ಅಭಿಪ್ರಾಯದಲ್ಲಿ ಈ ಮೇಲ್ಕಂಡ ಗಾಯಗಳು ಸಾಮನ್ಯ ಸ್ವರೂಪದ ಗಾಯಗಳಾಗಿರುತ್ತವೆ. ಈ ಮೇಲ್ಕಂಡ ಗಾಯಗಳು ಮಚ್ಚು ಮತ್ತು ದೊಣ್ಣೆಯಿಂದ ಹೊಡೆದಾಗ ಆಗುವ ಸಾಧ್ಯತೆ ಇರುತ್ತದೆ ಎಂದರೆ ಸರಿ.

ಈಗ ನನಗೆ ತೋರಿಸಿದ ದಾಖಲೆಯು ನಾನು ನೀಡಿದ ಗಾಯದ ಪ್ರಮಾಣ ಪತ್ರವಾಗಿದ್ದು ಅದರಲ್ಲಿ ನನ್ನ ರುಜು ಇರುತ್ತದೆ. ಗಾಯದ ಪ್ರಮಾಣ ಪತ್ರವನ್ನು ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ಒಬ್ಬ ವ್ಯಕ್ತಿ ಎಡವಿ ಒರಟಾದ ಸ್ಥಳದಲ್ಲಿ ಬಿದ್ದಾಗ ಮತ್ತು ಚೂಪಾದ ವಸ್ತುವಿಗೆ ತಾಗಿದಾಗ ಮೇಲ್ಕಂಡ ಗಾಯಗಳು ಆಗುವ ಸಾಧ್ಯತೆ ಇರುತ್ತದೆ ಎಂದರೆ ಸರಿಯಲ್ಲ. ಪಿರ್ಯಾದಿಗೆ ಅನುಕೂಲವಾಗಲಿ ಎಂದು ಅವರ ಕೋರಿಕೆಯ ಮೇರೆಗೆ ಸುಳ್ಳು ಗಾಯದ ಪ್ರಮಾಣ ಪತ್ರ ನೀಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ,

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

ಸಹಿ/-

**1ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**